**ಸಾಕ್ಷಿಯನ್ನು ದಿ 05-03-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ವಿಶೇಷ ಸ.ಸಾ.ಅ. ರವರಿಂದಃ**

ಹಿಂದಿನ ಸಾಕ್ಷಿ ವಿಚಾರಣೆಯಲ್ಲಿ ಬ್ಯಾಂಕಿನಿಂದ ನೀಡಿದ ಕವರಿಂಗ್ ಲೆಟರನ್ನು ನಿಪಿ-281 ಎಂದು ಗುರುತಿಸಲ್ಪಟ್ಟಿದ್ದು, ಆದರೆ ನಿಶಾನೀಕರಿಸಿದ ಬಗ್ಗೆ ಹಿಂದಿನ ಸಾಕ್ಷಿ ವಿಚಾರಣೆಯಲ್ಲಿ ನಮೂದು ಮಾಡಿರುವುದಿಲ್ಲ.

2. ನಾನು ಈಗ ದಿನಾಂಕಃ27-02-1998 ರಿಂದ 06-04-1998 ರವರೆಗಿನ ಪೆ ಆರ್ಡರ್ ರಿಜಿಸ್ಟರನ್ನು ಅಮಾನತ್ತು ಪಡಿಸಿಕೊಂಡಿದ್ದು ಅದನ್ನು ಪಿ.ಎಫ್ ಸಂಖ್ಯೆಃ 109/2003 ರಡಿಯಲ್ಲಿ ಆರ್ಟಿಕಲ್ ನಂಃ2 ರಂತೆ, ಪುಸ್ತಕ ನಂಃ1 ರಂತೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಪಿ-282** ಎಂದು, ಪುಟ ಸಂಖ್ಯೆಃ 87 ರಲ್ಲಿ ದಿನಾಂಕಃ 31-03-1998 ರಂದು ನಮೂದಿಸಿದ ಮೂರು ಎಂಟ್ರಿಗಳನ್ನು **ನಿಪಿ-282(ಎ)** ಎಂದು ಗುರುತಿಸಲಾಯಿತು. ಪಿ.ಎಫ್ ಸಂಖ್ಯೆಃ 44/2004 ರ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ-283** ಎಂದು ಗುರುತಿಸಲಾಯಿತು.

3. ನಿಪಿ-282(ಎ) ಗೆ ಸಂಬಂಧಿಸಿದ ಮೂರು ನಕಲಿ ಖಾತೆಗಳಿಂದ ಎರಡು ಕೋಟಿ ಹಣವನ್ನು ಅಮಾನತ್ತು ಕೋ-ಅಪರೇಟಿವ್ ಬ್ಯಾಂಕಿನ, ಎನ್.ಆರ್ ರೋಡ್ ಶಾಖೆಯಿಂದ ಮೂರು ಪೆ ಆರ್ಡರ್‌ಗಳ ಮೂಲಕ ಅಲ್ ಅಮೀನ್ ಹೌಸಿಂಗ್ ಡೆವೆಲಪ್ಮೆಂಟ್ ಕಾರ್ಪೊರೇಷನ್ ಎಂಬ ಕಂಪನಿಗೆ ವರ್ಗಾಯಿಸಲಾಗಿರುತ್ತದೆ. ಸದರಿ ವರ್ಗಾವಣೆಗೆ ಸಂಬಂಧಿಸಿದ ಮೂರು ಪೆ ಆರ್ಡರ್ ಗಳ ಬಗ್ಗೆ ಪಿ.ಎಫ್ ಸಂಖ್ಯೆಃ 44/2004 ರಲ್ಲಿ ತೋರಿಸಿರುವ ಕೆಂಪೇಗೌಡ ರಸ್ತೆ ಶಾಖೆಯ, ಬ್ಯಾಂಕ್ ಆಫ್ ಬರೋಡ ಖಾತೆಗೆ ಜಮಾ ಮಾಡಲಾಗಿರುತ್ತದೆ. ಅಮಾನತ್ತು ಕೊ ಅಪರೇಟಿವ್ ಬ್ಯಾಂಕಿನ ಅಧ್ಯಕ್ಷರು ಸದರಿ ಬ್ಯಾಂಕ್ ಆಫ್ ಬರೋಡದ ಖಾತೆಗೆ ಸಂಬಂಧಿಸಿ ನಿರ್ದೇಶಕರಾಗಿ ಇದ್ದರು.

4. ಇದೇ ವ್ಯವಹಾರಕ್ಕೆ ಸಂಬಂಧಿಸಿದಂತೆ ಪಿ.ಎಫ್ ಸಂಖ್ಯೆಃ 109/2003 ರಲ್ಲಿ , ಆರ್ಟಿಕಲ್ ಸಂಖ್ಯೆಃ 12, ಟ್ರಾನ್ಸ್ಫರ್ ಸ್ಕ್ರೋಲ್, ಪುಟ ಸಂಖ್ಯೆಃ 26, ಕ್ರಮ ಸಂಖ್ಯೆಃ 587, 588 ಮತ್ತು 589 ಸಹ ಅಳವಡಿಸಿಕೊಂಡಿರುತ್ತೇನೆ. ಸದರಿ ಒಟ್ಟು ಆರು ಪುಟಗಳ ದಾಖಲೆಯನ್ನು **ನಿಪಿ-284** ಎಂದು, ಕ್ರಮ ಸಂಖ್ಯೆಃ 587, 588 ಮತ್ತು 589 ಅನ್ನು **ನಿಪಿ-284(ಎ)** ಎಂದು ಗುರುತಿಸಲಾಯಿತು. ಸದರಿ ವ್ಯವಹಾರಗಳಿಗೆ ಸಂಬಂಧಿಸಿದ ನಿಪಿ-94-ಕೆ.ಹೆಚ್ ಟ್ರೇಡರ್ಸ್, ನಿಪಿ-95-ನ್ಯಾಷನಲ್ ಎಂಟರ್ ಪ್ರೈಸಸ್

ಮತ್ತು ನಿಪಿ-96- ಕ್ಲಾಸಿಕ್ ಟ್ರೆಡರ್ಸ್ ಗೆ ಸಂಬಂಧಿಸಿದ ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ. ಎ.ಪಿ ವಕೀಲರಿಂದಃ**

5. ದಿನಾಂಕಃ28-09-2003 ರಂದು ಎಸ್.ಪಿ ಸಿ.ಓ.ಡಿ ರವರು ಮಾಡಿದ ಆದೇಶದ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 2ನೇ ಆರೋಪಿಯ ಮನೆಯನ್ನು ಶೋದನೆ ಮಾಡಲು ನನ್ನ ಹಿಂದಿನ ತನಿಖಾಧಿಕಾರಿಯು ನ್ಯಾಯಾಲಯದಿಂದ ಆದೇಶವನ್ನು ಪಡೆದಿದ್ದರು. ಈ ರೀತಿ ಶೋಧನೆ ಮಾಡುವ ಮೊದಲು 2ನೇ ಆರೋಪಿಗೆ ನೋಟಿಸನ್ನು ಕೊಟ್ಟಿರುತ್ತೇನೆ. ನಿಪಿ-275ರಲ್ಲಿ ತೋರಿಸಿದಂತೆ ಯಾವುದೇ ಕಂಪ್ಯೂಟರ್ ಗಳನ್ನು, ದಾಖಲೆಗಳನ್ನು ಮತ್ತು ಖಾಲಿ ಹಾಳೆಗಳನ್ನು ಮತ್ತು ಪ್ರಮಾಣ ಪತ್ರಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಶೋಧನೆಗಾಗಿ 2ನೇ ಆರೋಪಿಯ ಮನೆಗೆ ಹೋದಾಗ 2ನೇ ಆರೋಪಿಯ ಕುಟುಂಬದವರು ಅಲ್ಲಿ ಇರಲಿಲ್ಲ. ನಾನು ತನಿಖಾಧಿಕಾರಿಗಳ ಜೊತೆ 2ನೇ ಆರೋಪಿಯ ಮನೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

6. ದಿನಾಂಕಃ27-08-2003 ರಂದು 1ನೇ ಆರೋಪಿಯ ಮನೆಗೆ ಶೋದನೆಗಾಗಿ ಹೋದಾಗ ಪಂಚನಾಮೆಯನ್ನು ಜರುಗಿಸಿರುತ್ತೇವೆ. ಅಲ್ಲಿ ಯಾವುದೇ ವಸ್ತುಗಳನ್ನು ನಾವು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯ ಮನೆಯನ್ನು ಶೋದನೆ ಮಾಡಲು ನನ್ನ ಹಿಂದಿನ ತನಿಖಾಧಿಕಾರಿಯು ನ್ಯಾಯಾಲಯದಿಂದ ಆದೇಶವನ್ನು ಪಡೆದಿದ್ದರು. ಈ ರೀತಿ ಶೋಧನೆ ಮಾಡುವ ಮೊದಲು 1ನೇ ಆರೋಪಿಗೆ ನೋಟಿಸನ್ನು ಕೊಟ್ಟಿರುತ್ತೇನೆ. ನಾವು ಶೋಧನೆಗಾಗಿ 1ನೇ ಆರೋಪಿಯ ಮನೆಗೆ ಹೋದಾಗ 1ನೇ ಆರೋಪಿಯ ಕುಟುಂಬದವರು ಅಲ್ಲಿ ಇರಲಿಲ್ಲ. ನಾನು ತನಿಖಾಧಿಕಾರಿಗಳ ಜೊತೆ 1ನೇ ಆರೋಪಿಯ ಮನೆಗೆ ಹೋಗಿರುವುದಿಲ್ಲ ಮತ್ತು ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

7. ಈ ಹಿಂದೆ ನಾನು ಹೇಳಿದಂತೆ ಚಾಸಾ-4 ರಿಂದ ಚಾಸಾ-46 ರವರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಮತ್ತು ಅವರು ನನ್ನ ಮುಂದೆ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣವನ್ನು ತನಿಖೆಗಾಗಿ ದಿನಾಂಕಃ 01-03-2004 ರಂದು ತೆಗೆದುಕೊಂಡಿದ್ದೇನೆ.

8. ದಿನಾಂಕಃ 21-02-2004 ರಂದು ಕೆ.ಜಿ ರಸ್ತೆಯ ಬ್ಯಾಂಕ್ ಆಫ್ ಬರೋಡ ಶಾಖೆಗೆ ಪ್ರಶ್ನಿತ ಖಾತೆಗೆ ಸಂಬಂಧಿಸಿ ದಿನಾಂಕಃ 06-05-1997 ರಿಂದ 12-04-1998ರ ಸಮಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುಂತೆ ನೋಟಿಸನ್ನು ನೀಡಿರುತ್ತೇನೆ. ಸದರಿ ಖಾತೆಯು ರೆಹಮಾನ್ ಖಾನ್ ಎಂಬುವವರ ಹೆಸರಿನಲ್ಲಿ ಇತ್ತು. ಸದರಿ ರೆಹಮಾನ್ ಖಾನ್ ರವರು ಆ ಸಮಯಕ್ಕೆ ಅಮಾನತ್ ಕೊ-ಅಪರೇಟಿವ್ ಬ್ಯಾಂಕಿನ ಅಧ್ಯಕ್ಷರಾಗಿದ್ದರು.

9. ನನ್ನ ತನಿಖೆಯ ಸಮಯದಲ್ಲಿ ಕೆ.ಜಿ ರಸ್ತೆಯ ಬ್ಯಾಂಕ್ ಆಫ್ ಬರೋಡ ಶಾಖೆಯವರು ದಾಖಲೆಗಳನ್ನು ಮರಳಿ ಕೊಟ್ಟ ಬಗ್ಗೆ ದಿನಾಂಕಃ 01-06-2006 ರಂದು ನೀಡಿದ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ, ಕಾರಣ ಸದರಿ ದಾಖಲೆಯನ್ನು ನನ್ನ ಮುಂದಿನ ತನಿಖಾಧಿಕಾರಿಯು ನೀಡಿರುತ್ತಾರೆ. ನಾನು ಬ್ಯಾಂಕಿಗೆ ಹೋಗಿ ನಕಲಿ ಖಾತೆಗಳಿಗೆ ಸಂಬಂಧಿಸಿ ಪೋಸ್ಟಲ್ ಕವರ್ ಗಳನ್ನು ಕಳುಹಿಸಿದ ಬಗ್ಗೆ ಬ್ಯಾಂಕಿನಲ್ಲಿ ಇರುವ ಎಂಟ್ರಿಗಳಿಗೆ ಸಂಬಂಧಿಸಿ ಔಟ್ ವರ್ಡ್ ಮತ್ತು ಇನ್ ವರ್ಡ್ ದಾಖಲೆಗಳನ್ನು ನಾನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈ ಕುರಿತು ಅಂಚೆ ಇಲಾಖೆಯವರೂ ಸಹ ವಿಚಾರಣೆ ಮಾಡಿರುವುದಿಲ್ಲ. ಸದರಿ ಕವರ್ ಗಳನ್ನು ಯಾರು ಕಳುಹಿಸಿರುತ್ತಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ.

10. 45 ಪೆ ಆರ್ಡರ್ ಗಳಿಗೆ ಸಂಬಂಧಿಸಿ ಬ್ಯಾಂಕಿನ ಅಧಿಕಾರಿಗಳಿಗೆ ನೋಟಿಸನ್ನು ಕೊಟ್ಟಿರುತ್ತೇನೆ, ಆದರೆ ವಿವರಣೆಯನ್ನು ಕೇಳಿ ನೋಟಿಸನ್ನು ಕೊಟ್ಟಿರುವುದಿಲ್ಲ. ನಿಪಿ-276ಕ್ಕೆ ಸಂಬಂಧಿಸಿದ 42 ಪೋಸ್ಟಲ್ ಕವರ್ ಗಳನ್ನು ಮೊಹಮ್ಮದ್ ಸಮಿಉಲ್ಲಾ ಖಾನ್ ಎಂಬುವವರು ಹಾಜರುಪಡಿಸಿರುತ್ತಾರೆ. ಸದರಿ ಕವರುಗಳನ್ನು ಯಾವುದೇ ಸೀಲು ಮಾಡದೆ ತೆಗೆದುಕೊಂಡು ಬಂದಿದ್ದರು. ಸದರಿ ಮೊಹಮ್ಮದ್ ಸಮಿಉಲ್ಲಾ ಖಾನ್ ಎಂಬುವವರು ಕಾನೂನು ಅಧಿಕಾರಿಯಾಗಿದ್ದರು, ಆದರೆ ಸದರಿ ದಾಖಲೆಗಳನು ಅವರ ಸುಪರ್ದಿಯಲ್ಲಿ ಇರಲಿಲ್ಲ. ಸದರಿ ದಾಖಲೆಗಳನ್ನು ತೆಗೆದುಕೊಳ್ಳುವ ಸಮಯದಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ, ಆದರೆ ಮಾಲುಪಟ್ಟಿಗೆ ಅಳವಡಿಸಿಕೊಂಡಿರುತ್ತೇನೆ. ಸದರಿ ದಾಖಲೆಗೆ ಸಿ.ಐ.ಡಿ ಕಛೇರಿಗೆ ತಂದು ಹಾಜರುಪಡಿಸಿದ್ದರು.

11. ನಾನು ಸದರಿ ಅಂಚೆ ಲಕೋಟೆಗಳಲ್ಲಿ ನಮೂದಿಸಿದ ವಿಳಾಸಗಳಿಗೆ ಬೇಟಿ ನೀಡಿರುತ್ತೇನೆ. ಆದರೆ ಅಲ್ಲಿ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ಆದರೆ ಅಲ್ಲಿ ವಿಚಾರಿಸಲಾಗಿ ಸದರಿ ವಿಳಾಸಗಳು ತಪ್ಪು ಎಂದು ತಿಳಿದುಬಂದಿರುತ್ತವೆ. ಅಲ್ಲಿ ನಾನು ವಿಚಾರಿಸಿದ ವ್ಯಕ್ತಿಗಳ ಹೆಸರುಗಳನ್ನು ಹೇಳಲು ಆಗುವುದಿಲ್ಲ. ನನ್ನ ಮುಂದೆ ಯಾವುದೇ ವ್ಯಕ್ತಿ ಸದರಿ ಅಂಚೆ ಲಕೋಟೆಗಳನ್ನು ಹಾಜುರುಪಡಿಸಿರುವುದಿಲ್ಲ ಮತ್ತು ನಾನು ಯಾವುದೇ ಸ್ಥಳಕ್ಕೆ ಬೇಟಿ ನೀಡಿ ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ.

12. ಸದರಿ ಬ್ಯಾಂಕಿನ ನಿರ್ದೇಶಕರ ಆದೇಶದ ಮೇರೆಗೆ ಸದರಿ ಅಂಚೆ ಲಕೋಟೆಗಳನ್ನು ಕಳುಹಿಸಿರಬಹುದು. ನಾನು ಬ್ಯಾಂಕುಗಳಿಂದ ಯಾವುದೇ ವಿವರಣೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿವರಣೆಯು ಈ ಪ್ರಕರಣಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ.

13. ಬ್ಯಾಂಕಿನ ಅಧ್ಯಕ್ಷರಾಗಿದ್ದ ಚಾಸಾ-53 ರವರ ಮಾದರಿ ಬರವಣಿಗೆಯನ್ನು ಪಂಚನಾಮೆ ಮೂಲಕ ತೆಗೆದುಕೊಂಡಿರುತ್ತೇನೆ. ಸದರಿ ಬರವಣಿಗಳನ್ನು ಬ್ಯಾಂಕ್ ಆಫ್ ಬರೋಡ ದಲ್ಲಿ ಅಕೌಂಟ್ ಓಪನಿಂಗ್ ಫಾರ್ಮ್ ಮತ್ತು ಹಣ ನಗದೀಕರಣ ಮಾಡಿದ ಪ್ರಶ್ನಿತ ಚೆಕ್ಕುಗಳಲ್ಲಿ ಇರುವ ಸಹಿಗಳೊಂದಿಗೆ ತಾಳೆ ಮಾಡಲು ತೆಗೆದುಕೊಂಡಿದ್ದೆ. ನನ್ನ ಮುಖ್ಯವಿಚಾರಣೆಯ ನಾಲ್ಕನೇ ಪುಟದಲ್ಲಿ ಮತ್ತು ಐದನೇ ಪುಟದ ಮೊದಲನೇಯ ಖಂಡಿಕೆಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಚಾಸಾ-53 ರವರಿಗೆ ಸಂಬಂಧಿಸಿದ್ದು ಎಂದರೆ ಸರಿ. ಎರಡು ಕೋಟಿ ಹಣಕ್ಕೆ ಸಂಬಂಧಿಸಿದ ದಾಖಲೆಗಳು ಹಾಳಾಗಿರುತ್ತವೆ ಎಂಬ ಬಗ್ಗೆ ನನಗೆ ಬ್ಯಾಂಕಿಗೆ ಹೋಗಿ ವಿಚಾರಿಸಿದಾಗ ತಿಳಿದುಬಂದಿರುತ್ತದೆ. ಈ ಬಗ್ಗೆ ವಿಚಾರವನ್ನು ಪ್ರಾಸಾ-8 ರವರಾದ ಮರ್ಸಿ ಸಬಾಸ್ಟೀನ್ ರವರು ತಿಳಿಸಿದ್ದರು.

14. ನನ್ನ ಮುಖ್ಯವಿಚಾರಣೆಯ ಐದನೇ ಪುಟದ, 2ನೇ ಕಂಡಿಕೆಯಲ್ಲಿ ಹೇಳಿದ ಮೂರು ಪೆ ಆರ್ಡರ್ ಗಳು ಮೂರು ಪ್ರಶ್ನಿತಾ ಖಾತೆಗಳಿಗೆ ಸಂಬಂಧಿಸಿದ್ದವು ಆಗಿರುತ್ತವೆ.

**ಮುಂ. ಪಾಟಿಸವಾಲಿಗೆ ವಕೀಲರು ಸಮಯವಕಾಶ ಕೋರಿರುತ್ತಾರೆ, ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ಮ. ದಂ. ನ್ಯಾ